16

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

# ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಪಾವಗಡ-561202

# ಸಾಂಸ್ಕೃತಿಕ ಏಕತಾ ದಿನ ವರದಿ




ದಿನಾಂಕ: 23-11-2020 ರಂದು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಪಾವಗಡ ಇಲ್ಲಿ ಸಾಂಸ್ಕೃತಿಕ ಏಕತಾ ದಿನವನ್ನು ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿತ್ತು. ವೇದಿಕೆಯ ಮೇಲಿರುವ ಪ್ರಮುಖರನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಅನಂತರಾಜು, ಸಹಾಯಕ ಪ್ರಾಧ್ಯಾಕರು ರವರು ಭಾರತದಲ್ಲಿ ಹಲವಾರು ಸಂಸ್ಕೃತಿಗಳಿದ್ದು, ಸಂವಿಧಾನದಲ್ಲಿ ಅವರವರ ಆಚರಣೆ ಪರಂಪರೆಗಳಿಗೆ ಅವಕಾಶವನ್ನು ಮಾಡಿಕೊಡಲಾಗಿದೆ ಎಂದರು. ಪ್ರಧಾನ ಭಾಷಣಾಕಾರರಾದ ಮಧುಕುಮಾರ್ ಎಂ ದೈಹಿಕ ಶಿಕ್ಷಣ ನಿರ್ದೇಶಕರು ರವರು ಭಾರತವು ಹಲವಾರು ಸಂಸ್ಕೃತಿಗಳ ನಾಡಾಗಿದ್ದು, ಅವುಗಳಲ್ಲಿನ ಪ್ರಮುಖಾಂಶಗಳನ್ನು ಎಲ್ಲರೂ ತಿಳಿದುಕೊಂಡು ಅವರವರ ಭಾವನೆಗಳಿಗೆ ಪ್ರೋತ್ಸಾಹ ನೀಡಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಮಾರಪ್ಪ ಕೆ ಓ ರವರು ಭಾರತವು ಪ್ರಪಂಚದಲ್ಲಿಯೇ ವೈವಿದ್ಯಮಯ ದೇಶವಾಗಿದ್ದು, ಹಲವಾರು ವಿಭಿನ್ನತೆಗಳನ್ನೊಳಗೊಂಡಿದೆ. ಅನೇಕ ಸಂಸ್ಕೃತಿಗಳಿದ್ದರೂ ಕೊನೆಯದಾಗಿ ಅವೆಲ್ಲವೂ ಭಾರತೀಯ ಸಂಸ್ಕೃತಿಯಾಗಿದೆ. ಈ ದಿನ ಸಾಂಸ್ಕೃತಿಕ ಏಕತಾ ದಿನವಾಗಿದ್ದು, ನಾವೆಲ್ಲರೂ ಇತರೆ ಸಂಸ್ಕೃತಿಗಳ ಬಗ್ಗೆ ತಿಳಿದು ಅವರವರ ಆಚರಣೆಗಳಿಗೆ ಪ್ರೋತ್ಸಾಹ ನೀಡುವುದರ ಮುಖಾಂತರ ಭಾರತಿಐ ಸಾಂಸಕೃತಿಕ ಏಕತೆಯನ್ನು ಮೆರೆಯಬೇಕೆಂದರು. ಸಹಾಯಕ ಪ್ರಾಧ್ಯಾಪಕರಾದ ಸುಮಾದೇವಿ ವಂದನಾರ್ಪಣೆ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಬೋಧಕರು, ಬೋಧಕೇತರ ಸಿಬ್ಬಂದಿ ಹಾಗೂ ಅಂತಿಮ ಪದವಿಯ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

IQAC Co-ordinator
Govt First Grade College for Women
Pavagada-561202

ಪ್ರಾಂಶುಪಾಲರು
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ಪಾವಗಡ-561202.